- -

**ದಿನಾಂಕ: 24.07.2024 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಆರ್ ಎಸ್ ಟಿ ವಕೀಲರಿಂದ**

ಬೆಳಗಾಲಪೇಟೆ ಗ್ರಾಮದಲ್ಲಿರುವ ಕಮಡೊಳ್ಳಿ ಎಂಬ ಕುಟುಂಬ ಬಹಳ ದೊಡ್ಡ ಕುಟುಂಬ ಎಂದರೆ ಸರಿಯಲ್ಲ ಸಾಕ್ಷಿ ಸಾಧಾರಣ ಕುಟುಂಬ ಎಂದು ಸ್ವತಃ ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ಹಲವಾರು ಪ್ರಕರಣಗಳು ಇದೇ ನ್ಯಾಯಾಲಯದಲ್ಲಿ ನಡೆದಿರುತ್ತವೆ ಎಂದರೆ ಸರಿ. ನಮ್ಮ ಅಣ್ಣ ತಮ್ಮಂದಿರ ನಡುವೆ ಹಿಸ್ಸೆ ದಾವೆ ನಡೆದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ಇಂದೂ ಸಹ ಚಾಲ್ತಿಯಲ್ಲಿವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಕ್ರಿಮಿನಲ್ ಪ್ರಕರಣಗಳು ಸಹ ಇದೇ ನ್ಯಾಯಾಲಯದಲ್ಲಿ ನಡೆದಿರುತ್ತವೆ ಎಂದರೆ ಸರಿಯಲ್ಲ. ಈ ರೀತಿ ನ್ಯಾಯಾಲಯಕ್ಕೆ ಪದೇ ಪದೇ ಬರುತ್ತಿದ್ದ ಕಾರಣ ನನಗೆ ನ್ಯಾಯಾಲಯದ ಬಗ್ಗೆ ಸಾಕಷ್ಟು ಅನುಭವ ಇದೆ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಗೌಸುಸಾಬನ ಹೆಣ್ಣುಮಕ್ಕಳು ಸಲ್ಲಿಸಿರುತ್ತಾರೆ. ಗೌಸುಸಾಬನಿಗೆ ಮೂರು ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು, ಆ ಹೆಣ್ಣು ಮಕ್ಕಳುಗಳ ಹೆಸರು ನನಗೆ ಗೊತ್ತಿಲ್ಲ. ಗೌಸುಸಾಬ ಅವರು ಕಳೆದ 10 ವರ್ಷಗಳ ಹಿಂದೆ ಬೆಳಗಾಲಪೇಟೆಯಲ್ಲಿ ಮೃತಪಟ್ಟಿದ್ದು ದಿನಾಂಕ ಮತ್ತು ತಿಂಗಳುಗಳು ನನಗೆ ಗೊತ್ತಿಲ್ಲ. ಗೌಸುಸಾಬ ಆರೋಗ್ಯ ಸರಿಯಿಲ್ಲದ ಕಾರಣ ಮೃತಪಟ್ಟರು ಎಂದರೆ ಸರಿಯಲ್ಲ. ಆತ ಎಷ್ಟು ವರ್ಷಗಳ ಕಾಲ ಹಾಸಿಗೆ ಹಿಡಿದಿದ್ದ ಈಗ ನನಗೆ ನೆನಪಿಲ್ಲ. ಆತನ ಆಸ್ಪತ್ರೆ ಖರ್ಚು ಮತ್ತು ಯೋಗ ಕ್ಷೇಮವನ್ನು ಆತನ ಗಂಡು ಮಕ್ಕಳೇ ನೋಡಿಕೊಳ್ಳುತ್ತಿದ್ದರು. ಗೌಸುಸಾಬ ಎಷ್ಟು ವರ್ಷಗಳ ಕಾಲ ಆತನ ಮಕ್ಕಳಿಂದ ಬೇರೆಯಾಗಿ ವಾಸಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಗೌಸುಸಾಬ ಅವರು ತನ್ನ ಇಬ್ಬರು ಮಕ್ಕಳ ಜೊತೆಯಲ್ಲಿ ವಾಸವಾಗಿದ್ದರು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಗೌಸುಸಾಬನ ಮನೆ ದೂರದಲ್ಲಿರುವ ಕಾರಣ ಆತನ ಮನೆತನದ ದಿನನಿತ್ಯದ ವ್ಯವಹಾರಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿದಿನವೂ ಸಹ ಡೈರಿಗೆ ಹಾಲು ಹಾಕುವ ಕಾರಣ ಆ ಕಡೆ ಹೋಗುತ್ತಿದ್ದ ಆದರೆ ಅವಶ್ಯಕತೆ ಇರುವ ದಿನಗಳಲ್ಲಿ ಮಾತ್ರ ಅವರ ಮನೆಗೆ ಹೋಗುತ್ತಿದ್ದೆನು. ಆದರೆ ಪ್ರತಿದಿನವೂ ಸಹ ಹೋಗುತ್ತಿರಲಿಲ್ಲ. ನಾನು ಕಳೆದ 3–4 ತಿಂಗಳುಗಳ ಹಿಂದೆ ಮಾವಿನಹಣ್ಣು ತರಲು 6 ನೇ ಪ್ರತಿವಾದಿ ಮನೆಗೆ ಹೋಗಿದ್ದೆನು. 6 ನೇ ಪ್ರತಿವಾದಿ ಮಾವಿನ ಗಿಡದ ವ್ಯಾಪಾರ ಮಾಡುತ್ತಿದ್ದರೋ ಇಲ್ಲವೋ ನನಗೆ

ಗೊತ್ತಿಲ್ಲ. 6 ನೇ ಪ್ರತಿವಾದಿಯ ಮನೆತನಕ್ಕೆ ಸಂಬಂಧಪಟ್ಟಂತೆ ಮಾವಿನ ವ್ಯಾಪಾರ ಹೊರತುಪಡಿಸಿ ಬೇರೆ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಗೌಸುಮೋದ್ದಿನ ಹೆಣ್ಣು ಮಕ್ಕಳನ್ನು ಯಾವ ಇಸ್ವಿಯಂದು ಮತ್ತು ಯಾರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದು ಹೇಳಲು ಈಗ ನನಗೆ ನೆನಪಿರುವುದಿಲ್ಲ. ಈ ಬಗ್ಗೆ ಪ್ರತಿವಾದಿಯರನ್ನು ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ ಮತ್ತು ಈ ಬಗ್ಗೆ ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

ದಸ್ತಗಿರಸಾಬನ ತಾಯಿ ಹೆಸರು ಈಗ ನನಗೆ ನೆನಪಿಲ್ಲ. ಅವರು ಯಾವ ತಿಂಗಳು ಮತ್ತು ವರ್ಷದಂದು ಮೃತಪಟ್ಟರು ನನಗೆ ನೆನಪಿಲ್ಲ. ಅದೇ ರೀತಿ ದಸ್ತಗಿರಸಾಬ 6 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಆದರೆ ದಿನಾಂಕ ನೆನಪಿಲ್ಲ. ದಸ್ತಗಿರಸಾಬನ ತಾಯಿ ಮೊದಲು ಮೃತಪಟ್ಟಿದ್ದು ಆನಂತರ ದಸ್ತಗಿರಸಾಬ ಮೃಟಪಟ್ಟಿರುತ್ತಾನೆ. ದಸ್ತಗಿರಸಾಬನ ಮನೆತನದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ಮನದಾಳದ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಜಹೀರಾಬಿ ಅವರ ಹೆಸರಿನಲ್ಲಿ ಆಸ್ತಿಗಳು ಇವೆ. ಆಕೆಯ ಗಂಡ ಗೌಸುಸಾಬನ ಹೆಸರಿನಲ್ಲಿ ಮನದಾಳದ ಆಸ್ತಿಗಳು ಇವೆ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಇಂದಿಗೂ ಸಹ ಗೌಸುಸಾಬನ ಹೆಸರಿನಲ್ಲಿ ಮನದಾಳದ ಆಸ್ತಿಗಳು ಇವೆ ಎಂದರೆ ಸರಿಯಲ್ಲ ಸಾಕ್ಷಿ ಆತನ ಮಕ್ಕಳ ಹೆಸರಿಗೆ ಆಗಿರುತ್ತವೆ ಎಂದು ಸ್ವತಃ ನುಡಿಯುತ್ತಾರೆ. ಗೌಸುಸಾಬನ ಹೆಸರಿನಲ್ಲಿ ಮನದಾಳದ ಆಸ್ತಿಗಳು ಆತನ ಇಬ್ಬರು ಗಂಡು ಮಕ್ಕಳ ಹೆಸರಿಗೆ ಮಾತ್ರ ಆಗಿರುವ ಬಗ್ಗೆ ಮಾಹಿತಿ ಇದೆ ಅವುಗಳು ಆತ ಮೃತಪಟ್ಟ ನಂತರ ವಾರಸಾ ಪ್ರಕಾರ ಅವರ ಹೆಸರಿಗೆ ದಾಖಲಾಗಿರುತ್ತವೆ.

ಯಾವುದೇ ಒಬ್ಬ ತಂದೆ ಮೃತಪಟ್ಟ ನಂತರ ಆತನ ಆಸ್ತಿಗಳು ಅವನ ಎಲ್ಲಾ ಮಕ್ಕಳಿಗೂ ಸೇರಬೇಕಾಗುತ್ತದೆ ಎಂದರೆ ಸರಿ, ಸಾಕ್ಷಿಯು ಕೆಲವು ಸಂದರ್ಭದಲ್ಲಿ ಕೆಲವು ಮಕ್ಕಳನ್ನು ಹೊರತುಪಡಿಸಿ ಆಸ್ತಿಗಳನ್ನು ಬಿಟ್ಟುಕೊಡಲಾಗಿದೆ ಎಂದು ಸ್ವತಃ ನುಡಿಯುತ್ತಾರೆ. ಆ ಆಸ್ತಿಗಳನ್ನು ಆತನ ಹೆಣ್ಣುಮಕ್ಕಳು ಬಿಟ್ಟುಕೊಟ್ಟ ಬಗ್ಗೆ ಮತ್ತು ಈ ಬಗ್ಗೆ ದಾಖಲೆ ಮಾಡಿದ ಬಗ್ಗೆ ಮಾಹಿತಿ ಇರುವುದಿಲ್ಲ. ಆತನ ಹೆಣ್ಣು ಮಕ್ಕಳು ಯಾವುದೇ ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ವ್ಯವಹಾರದಲ್ಲಿ ನಾನು ಸಹ ಭಾಗವಹಿಸಿರುತ್ತೇನೆ. 1974 ನೇ ಸಾಲಿನಲ್ಲಿ ಆತನ ಮಕ್ಕಳುಗಳ ಹೆಸರಿಗೆ ದಾಖಲಾಗಿರುತ್ತವೆ. ಆ ವ್ಯವಹಾರದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರುಾ ಭಾಗವಹಿಸಿದ್ದರು ಈಗ ನನಗೆ ನೆನಪಿಲ್ಲ. ಆ ಸಂದರ್ಭದಲ್ಲಿ ಈ ಬಗ್ಗೆ ಕಾಗದ ಪತ್ರಗಳನ್ನು ಮಾಡಲಾಗಿತ್ತು. ಆ ಕಾಗದ ಪತ್ರಕ್ಕೆ ನಾನು ಸಹಿ ಮಾಡಿದ್ದನೋ ಇಲ್ಲವೋ ಎಂಬುದು ನೆನಪಿಲ್ಲ ಆ ಕಾಗದ ಪತ್ರಕ್ಕೆ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿದ್ದರು ನೆನಪಿಲ್ಲ ಆ ಕಾಗದ

ಪತ್ರವನ್ನು ಗೌಸುಸಾಬ ಮನೆಯಲ್ಲಿ ಮಾಡಲಾಯಿತು. ದಾಖಲೆಯನ್ನು ಸ್ಟಾಂಪ್ ಪೇಪರನ ಮೇಲೆ ಮಾಡಲಾಗಿತ್ತು. ಎಷ್ಟು ಮುಖ ಬೆಲೆಯ ಸ್ಟಾಂಪ್ ಪೇಪರ ಮೇಲೆ ಮಾಡಲಾಯಿತು ನನಗೆ ನೆನಪಿಲ್ಲ. ಆ ಬಾಂಡ್ ಪೇಪರನ್ನು ಯಾರೂ ಖರೀದಿಸಿದರು ಎಂಬುದು ನನಗೆ ನೆನಪಿಲ್ಲ.

1974 ನೇ ಸಾಲಿನಲ್ಲಿ ಗೌಸುಸಾಬನ ಹೆಣ್ಣು ಮಕ್ಕಳು ತನ್ನ ಸಮಕ್ಷಮ ಬಾಂಡ್ ಪೇಪರನ ಮೇಲೆ ಸಹಿ ಮಾಡಿ ತಮ್ಮ ಹಕ್ಕನ್ನು ಬಿಟ್ಟುಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮನದಾಳದ ಆಸ್ತಿಗಳ ನಂಬರು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ ವಾಸವಾಗಿರುವ ಮನೆ ಯಾರ ಹೆಸರಿನಲ್ಲಿದೆ ಎಂಬುದು ನನಗೆ ನೆನಪಿಲ್ಲ. ಆ ಮನದಾಳದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಎಷ್ಟು ಉತಾರೆಗಳಿವೆ ಎಂಬುದು ನನಗೆ ನೆನಪಿಲ್ಲ. ಆ ಕಾರಣ ಆ ಮನದಾಳದ ಆಸ್ತಿಗಳ ಚಕಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದ ವಿಚಾರ ನನಗೆ ಗೊತ್ತು. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಜಮೀನುಗಳ ಬಗ್ಗೆ ಮಾತ್ರ ಬರೆಯಲಾಗಿರುತ್ತದೆ. ಜಹೀರಾಬಿ ಅವರ ಹೆಸರಿನಲ್ಲಿ ಜಮೀನುಗಳು ಇವೆ. ಆಕೆ ಮೃತಪಟ್ಟ ನಂತರ ಸರಕಾರದ ಸೌಲಭ್ಯ ಪಡೆಯುವ ಸಲುವಾಗಿ, ವಿಮೆ ಪಾವತಿಸುವ ಸಲುವಾಗಿ ಮತ್ತು ಸಣ್ಣ ಹಿಡುವಳಿದಾರಿಕೆ ಸೌಲಭ್ಯ ಪಡೆಯುವ ಸಲುವಾಗಿ ಆಸ್ತಿಗಳನ್ನು ಅವರಿಬ್ಬರ ಮಕ್ಕಳ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ಗೌಸುಸಾಬನ ಎಲ್ಲಾ ಮಕ್ಕಳು ಆತನ ಆಸ್ತಿಯಲ್ಲಿ ವಹಿವಾಟು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮಕಬೂಲಸಾಬ ಮಿಠಾಯಿಗಾರ ಅವರ ಪರಿಚಯ ಇದೆ. ಅದೇ ರೀತಿ ವಿರೇಶ ತಳವಾರ ಅವರು ಸಹ ಗೊತ್ತು. ಆತನ ಹೆಂಡತಿ ಗ್ರಾಮ ಪಂಚಾಯತಿ ಸದಸ್ಯಳು ಎಂಬುದು ಸಹ ಗೊತ್ತು. ಅವರು ಇಬ್ಬರು ಒಂದೇ ಪಕ್ಷದಿಂದ ಆಯ್ಕೆಯಾಗಿದ್ದಾರೆ ಎಂದರೆ ಸರಿ. ಮಕಬೂಲಸಾಬ ಮಿಠಾಯಿಗಾರ ಅವರು ಸಹ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರು ಆಗಿದ್ದರು ಎಂದರೆ ಸರಿ. ಆ ಇಬ್ಬರು ಸಹ ಪ್ರತಿವಾದಿ ವಾಸವಾಗಿರುವ ವಾರ್ಡನಿಂದಲೇ ಆಯ್ಕೆಯಾಗಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳುಗಳು ಮಕಬೂಲಸಾಬ ಮಿಠಾಯಿಗಾರ ಅವರ ಹಿಂಬಾಲಕರು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಮಕಬೂಲಸಾಬ ಮಿಠಾಯಿಗಾರ ಅವರಿಗೆ ಬೆಂಬಲ ಸೂಚಿಸಿದ ಕಾರಣ ಆತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಯ ಮಾತು ಕೇಳಿ

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಎಂದಿಗೂ ಸಹ ದಾವಾ ಆಸ್ತಿಗಳಲ್ಲಿ ಕಾನೂನು ರೀತಿ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ

ಹಾನಗಲ್

- -

**ದಿನಾಂಕ: 24.07.2024 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಆರ್ ಎಸ್ ಟಿ ವಕೀಲರಿಂದ**

ನಾನು 1 ನೇ ತರಗತಿಯವರೆಗೆ ಶಾಲೆಯನ್ನು ಕಲಿತಿದ್ದೇನೆ. ನನಗೆ ಕನ್ನಡ ಬರೆಯಲು ಬರುವುದಿಲ್ಲ, ಆದರೆ ಸ್ವಲ್ಪ ಮಟ್ಟಿಗೆ ಓದುತ್ತೇನೆ. ಈ ಪ್ರಕರಣವನ್ನು ವಾದಿ ಪ್ರತಿವಾದಿ ವಿರುದ್ಧ ಜಮೀನಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ. ದಸ್ತಗಿರಸಾಬನ ತಂದೆ ಹೆಸರು ಗೌಸುಸಾಬ ಯಾವಗಲ್ ಆಗಿರುತ್ತದೆ. ಗೌಸುಸಾಬ ಯಾವಗಲ್ ನ ಇಬ್ಬರು ಗಂಡು ಮಕ್ಕಳ ಹೆಸರು ಗೊತ್ತು ಆದರೆ ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ಆತನಿಗೆ ಎಷ್ಟು ಜನ ಹೆಣ್ಣು ಮಕ್ಕಳು ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆ ಹೆಣ್ಣು ಮಕ್ಕಳು ಎಲ್ಲಿ ವಾಸವಾಗಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಮನೆ ಗೌಸುಸಾಬನ ಮನೆಯಿಂದ 200 ಮೀಟರ್ ದೂರದಲ್ಲಿದೆ. ಗೌಸುಸಾಬನ ಮನೆತನದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗೌಸುಸಾಬ ಕುಟುಂಬದ ಆಸ್ತಿಗಳನ್ನು ಕಳೆದ 7–8 ವರ್ಷಗಳ ಹಿಂದೆ ಹಂಚಿಕೊಂಡರು. ಆತನ ಅಕ್ಕ–ತಂಗಿಯರಿಗೆ ಆಸ್ತಿ ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗೌಸುಸಾಬನ ಮನೆತನದ ಆಸ್ತಿಗಳಲ್ಲಿ ಹಿಸ್ಸೆ ದಿಸ್ಸೆ ಮಾಡಿಕೊಳ್ಳುವ ಸಂದರ್ಭದಲ್ಲಿ ನಾನು ಭಾಗವಹಿಸಿರಲಿಲ್ಲ. ಅದೇ ರೀತಿ ಎಲ್ಲಿ ಹಿಸ್ಸೆ ದಿಸ್ಸೆ ಮಾಡಿಕೊಂಡು ನನಗೆ ಗೊತ್ತಿಲ್ಲ. ಈ ರೀತಿ ಹಿಸ್ಸೆ ಬಗ್ಗೆ ದಾಖಲೆ ಮಾಡಿಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ಗೌಸುಸಾಬನ ಮನೆತನಕ್ಕೆ ಎಷ್ಟು ಮನದಾಳದ ಆಸ್ತಿಗಳು ಇವೆ ಮತ್ತು ಅದರ ನಂಬರುಗಳು ಗೊತ್ತಿಲ್ಲ. ಅದೇ ರೀತಿ ಆ ಮನದಾಳದ ಆಸ್ತಿಗಳು ಯಾರ ಹೆಸರಿನಲ್ಲಿವೆ ನನಗೆ ಗೊತ್ತಿಲ್ಲ. ಆ ಮನದಾಳದ ಆಸ್ತಿಗಳ ಚಕಬಂದಿ ನನಗೆ ಗೊತ್ತಿಲ್ಲ. ಆ ಮನದಾಳದ ಆಸ್ತಿಗಳು ಗೌಸುಸಾಬನ ಕುಟುಂಬಕ್ಕೆ ಯಾವ ರೀತಿ ಬಂದವು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಸ್ತಗಿರಸಾಬನ ತಾಯಿ ಹೆಸರು ನನಗೆ ಗೊತ್ತಿಲ್ಲ. ದಸ್ತಗಿರಸಾಬನ ತಾಯಿ ಹೆಸರಿಗೆ ಆಸ್ತಿಗಳು ಬಂದಿದ್ದವೋ ಇಲ್ಲವೋ ಎಂಬುದು ಸಹ ನನಗೆ ಗೊತ್ತಿಲ್ಲ. ದಸ್ತಗಿರಸಾಬ ಯಾವ ಇಸ್ವಿಯಂದು ಮೃತಪಟ್ಟನು ಎಂದು ನನಗೆ ಗೊತ್ತಿಲ್ಲ. ದಸ್ತಗಿರಸಾಬನ ತಾಯಿ ಜಹೀರಾಬಿ ಅವರು ಯಾವ ವರ್ಷ ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ. ದಸ್ತಗಿರಸಾಬ ಅವರು ಮೃತಪಟ್ಟ ನಂತರ ಜಹೀರಾಬಿ ಅವರು ಮೃತಪಟ್ಟಿರುತ್ತಾರೆ. ಜಹೀರಾಬಿ ಅವರ ಹೆಸರಿನಲ್ಲಿ ಯಾವ ಆಸ್ತಿಗಳು ಇವೆ ಎಂಬುದು ನನಗೆ ಗೊತ್ತಿಲ್ಲ. ಅದೇ ರೀತಿ ಆಕೆ

ಹೆಸರಿನಲ್ಲಿರುವ ಜಮೀನಿನ ಸರ್ವೆ ನಂಬರು ಮತ್ತು ಚಕಬಂದಿ ಸಹ ನನಗೆ ಗೊತ್ತಿಲ್ಲ. ಆಕೆ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇತ್ತು ಎಂಬುದು ನನಗೆ ಗೊತ್ತಿಲ್ಲ.

ದಸ್ತಗಿರಸಾಬನ ತಂದೆ ಗೌಸುಸಾಬ ಅವರು ಯಾವ ವರ್ಷ ಮೃತಪಟ್ಟರು ನನಗೆ ಗೊತ್ತಿಲ್ಲ. ಆತ ಮೃತಪಟ್ಟ ಸಂದರ್ಭದಲ್ಲಿ ಆತನ ಹೆಸರಿನಲ್ಲಿ ಆಸ್ತಿಗಳು ಇರಲಿಲ್ಲ. ಈ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ ಸರ್ವೆ ನಂ.49/1 ರ ಆಸ್ತಿಯನ್ನು ಖರೀದಿಸಿದ ಸಂದರ್ಭದಲ್ಲಿ ನಾನು ಸಣ್ಣವನಿದ್ದ ಕಾರಣ ಆ ವ್ಯವಹಾರದಲ್ಲಿ ಭಾಗವಹಿಸಿರಲಿಲ್ಲ, ಅದೇ ರೀತಿ ಆ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಆಸ್ತಿಗಳಲ್ಲಿ ಈವರೆಗೂ ಸಹ ಯಾವುದೇ ವಾಟ್ನಿಯಾಗಿಲ್ಲ ಕೂಡಿಯೇ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಸರಕಾರದಿಂದ ಸೌಲಭ್ಯ ಪಡೆಯುವ ಸಲುವಾಗಿ ಮತ್ತು ವಿಮೆ ಕಟ್ಟುವ ಸಲುವಾಗಿ ಕಂದಾಯ ಇಲಾಖೆ ದಾಖಲೆಗಳನ್ನು ತಮ್ಮ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ಸರಿ.

ನನ್ನ ಸಹೋದರನ ಹೆಂಡತಿ ಗ್ರಾಮ ಪಂಚಾಯತಿಯ ಸದಸ್ಯನಾಗಿರುತ್ತಾನೆ. ಅದೇ ರೀತಿ ಮಕಬೂಲಸಾಬ ಮಿಠಾಯಿಗಾರ ಅವರು ಸಹ ಗ್ರಾಮ ಪಂಚಾಯತಿಯ ಸದಸ್ಯನಾಗಿರುತ್ತಾನೆ. ಈ ಇಬ್ಬರು ಸಹ ಒಂದೇ ಪಕ್ಷದಿಂದ ಚುನಾಯಿಸಲ್ಪಟ್ಟಿರುತ್ತಾರೆ. ಈ ಇಬ್ಬರೂ ಸಹ ಪ್ರತಿವಾದಿಯರು ವಾಸಿಸುತ್ತಿರುವ ಓಣಿಯಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ. ಈ ಇಬ್ಬರನ್ನು ಸಹ ಪ್ರತಿವಾದಿಯರು ಚುನಾವಣೆಯಲ್ಲಿ ಗೆಲ್ಲಿಸಿರುತ್ತಾರೆ ಎಂದರೆ ಸರಿ. ಆ ಕಾರಣ ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಗೌಸುಮೋದಿನ ಮತ್ತು ಆತನ ಹೆಂಡತಿ ಆಸ್ತಿಗಳಾಗಿರುವ ಕಾರಣ ಆತನ ಮಕ್ಕಳುಗಳಿಗೆ ಹೋಗಬೇಕಾಗುತ್ತದೆ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ